ಖರೀದಿಸಲಾಗಿದೆ?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಸಚಿವರು):-

ಅ)05

ಆ)ರೂ.26,500-00

ಇ)ರೂ.3.12 ಲಕ್ಷಗಳು

ಈ)03 ಮೂರಕ್ಕೂ ಅನುಮತಿ ಮತ್ತು ಧನ ಸಹಾಯ ನೀಡಲಾಗಿದೆ.

ಉ)ಇಲ್ಲ. 5475

ವಿಷಯ:- ಪಿ.ಯು.ಸಿ. ದ್ವಿತೀಯ ವರ್ಷದ ''ಕರ್ನಾಟಕ ಇತಿಹಾಸ'' ಪುಸ್ತಕದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 111 (467)

ಶ್ರೀ ಆಶೋಕ ಕಾಟವೇ (ಹುಬ್ಬಳ್ಳಿ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಜ್ಯದಲ್ಲಿ ಪಿ.ಯು.ಸಿ.ದ್ವಿತೀಯ ವರ್ಷದ ಪಠ್ಯಪುಸ್ತಕವಾಗಿ ''ಕರ್ನಾಟಕ ಇತಿಸಾಸ'' ಅಳವಡಿಸಿದ್ದು ಪ್ರಸಕ್ತ ವರ್ಷಕ್ಕೆ ''ಭಾರತದ ಇತಿಹಾಸ'' ಎಂದು ಬದಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

3. ಹಳೆಯ ಪಠ್ಯ ಪುಸ್ತಕವನ್ನೇ ಮುಂದುವರೆಸಲು ಇರುವ ತೊಂದರೆಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1) ಬಂದಿದೆ

2) ಪಠ್ಯಸೂಚಿ ರಚನಾ ಮಂಡಳಿಯ ತೀರ್ಮಾನದಂತೆ ಈ ಬದಲಾವಣೆ ಆಗಿದೆ.

3) 1996-97 ಮತ್ತು 1997-98ನೇ ಸಾಲಿಗೆ ಹಳೆ ಪಠ್ಯಪುಸ್ತಕವನ್ನೇ ಮುಂದುವರಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಈ ಪಠ್ಯವನ್ನು ಮುಂದುವರಿಸುವ ಅಥವಾ ಬದಲಾಯಿಸುವ ಬಗ್ಗೆ ತಜ್ಞರ ಸಮಿತಿಯೊಂದನ್ನು ರಚಿಸಿ ಅದರ ವರದಿ ಬಂದ ನಂತರ ಈ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ:- ವಿಜಾಪುರ ಜಿಲ್ಲೆಯಲ್ಲಿರುವ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರತಕ್ಕ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 113 (44)

ಶ್ರೀ ಬಸನಗೌಡ ರಾ.ಪಾಟೀಲ್ (ವಿಜಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಕಿರಿಯ ಕಾಲೇಜುಗಳೆಷ್ಟು (ಹೆಸರುಗಳ ಸಹಿತ ಪಟ್ಟಿ ನೀಡುವುದು) ಸದರಿ ಕಾಲೇಜುಗಳಲ್ಲಿ ಇರುವ ಶಿಕ್ಷಣದ ಹಾಗೂ ಶಿಕ್ಷಕೇತರ ಸಿಬ್ಬಂದಿ ಎಷ್ಟು? (ಪ್ರತಿ ಕಾಲೇಜುವಾರು ವಿವರ ನೀಡುವುದು)

ಆ) ಈ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕ ಹಾಗೂ ಶಿಕ್ಷಕೇತರ ಹುದ್ದೆಗಳೆಷ್ಟು? (ಕಾಲೇಜುವಾರು ವಿವರ ನೀಡುವರು)

ಇ) ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಸದರಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಶಿಕ್ಷಣ ಸಚಿವರು):-

ಅ) 22 (ಪಟ್ಟಿ ಲಗತ್ತಿಸಲಾಗಿದೆ)

ಆ) ಉಪನ್ಯಾಸಕರು-63. ಶಿಕ್ಷಕೇತರರು: ಪಟ್ಟಿ ಲಗತ್ತಿಸಲಾಗಿದೆ.

ಇ) ಲೋಕಸೇವಾ ಆಯೋಗದ ಈ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಖಾಲಿಯಿರುವ 864 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಲೋಕಸೇವಾ ಆಯೋಗದ ಆಯ್ಕೆ ಪಟ್ಟಿ ಬಂದ ತಕ್ಷಣ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಪ್ರಸ್ತುತ ಆರ್ಥಿಕ ಮಿತವ್ಯಯ ಆದೇಶವು ಜಾರಿಯಲ್ಲಿರುವುದರಿಂದ ಖಾಲಿಯಿರುವ ಶಿಕ್ಷಕೇತರ ಸಿಬ್ಬಂದಿಯನ್ನು ತುಂಬಲು ಸಾಧ್ಯವಿಲ್ಲ.

ಕ್ರಮ ಸಂಖ್ಯೆ	ಕಾಲೇಜಿನ ವಿಳಾಸ
1	ಸರ್ಕಾರಿ ಪದವಿಪೂರ್ವ ಕಾಲೇಜು, ಜಮಖಂಡಿ (ಬಾಲಕಿಯರ)
2	ಸರ್ಕಾರಿ ಪದವಿಪೂರ್ವ ಕಾಲೇಜು, ಬಿಜಾಪುರ (ಬಾಲಕರ)
3	ಸರ್ಕಾರಿ ಪದವಿಪೂರ್ವ ಕಾಲೇಜು, ಇಳಕಲ್ಲ
4	ಸರ್ಕಾರಿ ಪದವಿಪೂರ್ವ ಕಾಲೇಜು, ಬಸವನಬಾಗೇವಾಡಿ
5	ಸರ್ಕಾರಿ ಪದವಿಪೂರ್ವ ಕಾಲೇಜು, ಬಾಗಲಕೋಟೆ (ಬಾಲಕಿಯರ)
6	ಸರ್ಕಾರಿ ಪದವಿಪೂರ್ವ ಕಾಲೇಜು, ಬಿಜಾಪುರ (ಬಾಲಕಿಯರ)
7	ಸರ್ಕಾರಿ ಪದವಿಪೂರ್ವ ಕಾಲೇಜು, ಗುಳೇದಗುಡ್ಡ (ಬಾಲಕರ)
8	ಸರ್ಕಾರಿ ಪದವಿಪೂರ್ವ ಕಾಲೇಜು, ರಬಕವಿ ಬನಹಟ್ಟಿ
9	ಸರ್ಕಾರಿ ಪದವಿಪೂರ್ವ ಕಾಲೇಜು, ಧನ್ನೂರು
10	ಸರ್ಕಾರಿ ಪದವಿಪೂರ್ವ ಕಾಲೇಜು, ಕಂದಗಲ್
11	ಸರ್ಕಾರಿ ಪದವಿಪೂರ್ವ ಕಾಲೇಜು, ಚಿಕ್ಕಲಗುಂಡಿ
12	ಸರ್ಕಾರಿ ಪದವಿಪೂರ್ವ ಕಾಲೇಜು, ಜಮಖಂಡಿ (ಬಾಲಕರ)
13	ಸರ್ಕಾರಿ ಪದವಿಪೂರ್ವ ಕಾಲೇಜು, ಜಯವಾಡಗಿ
14	ಸರ್ಕಾರಿ ಪದವಿಪೂರ್ವ ಕಾಲೇಜು, ಕೂಡಗಿ
15	ಸರ್ಕಾರಿ ಪದವಿಪೂರ್ವ ಕಾಲೇಜು, ನೀರಬೂದಿಹಾಳ
16	ಸರ್ಕಾರಿ ಪದವಿಪೂರ್ವ ಕಾಲೇಜು, ಕರಡಿ
17	ಸರ್ಕಾರಿ ಪದವಿಪೂರ್ವ ಕಾಲೇಜು, ಚಿತ್ತರಗಿ
18	ಸರ್ಕಾರಿ ಪದವಿಪೂರ್ವ ಕಾಲೇಜು, ಗುಳೇದಗುಡ್ಡ (ಬಾಲಕಿಯರ)
19	ಸರ್ಕಾರಿ ಪದವಿಪೂರ್ವ ಕಾಲೇಜು, ಶಿರಶ್ಯಾಡಾ
20	ಸರ್ಕಾರಿ ಪದವಿಪೂರ್ವ ಕಾಲೇಜು, ಹುನ್ನೂರ
21	ಸರ್ಕಾರಿ ಪದವಿಪೂರ್ವ ಕಾಲೇಜು, ನಾಗೂರ
22	ಸರ್ಕಾರಿ ಪದವಿಪೂರ್ವ ಕಾಲೇಜು, ಬರಡೋಲ

ಮಂಜೂರಾದ ಹುದ್ದೆಗಳ ಸಂಖ್ಯೆ		ಖಾಲಿಯಿರುವ ಹುದ್ದೆಗಳ ಸಂಖ್ಯೆ	
ಶಿಕ್ಷಕರು	ಶಿಕ್ಷಕೇತರರು	ಶಿಕ್ಷಕರು	ಶಿಕ್ಷಕೇತರರು
13	07	02	01
15	20	01	02
11	10	02	01
16	07	06	-
13	07	02	01
14	14	01	09
13	08	04	01
11	04	-	01
06	04	02	-
06	05	03	01
06	02	01	-
11	11	01	-
06	02	-	01
06	02	01	-
06	04	02	01
06	05	02	01
06	05	04	-
11	04	04	-
11	02	07	-
11	04	07	-
11	02	07	01
11	02	08	-